

### ಮೈ ಬಂದುಬಿಡುತ್ತೆ

ಪ್ರಿಯ ಒಂದು ಕಲ್ಲಂಗಡಿ ಹಣ್ಣನ್ನು ಖರೀದಿಸಿದಳು. 'ಎಷ್ಟು ಹೋಳು ಮಾಡಲಿ ಅಮ್ಮ? ನಾಲಕ್ಕೋ, ಎಂಟೋ' ಅಂಗಡಿಯವನು ಕೇಳಿದ.

'ನಾಲ್ಕೇ ಮಾಡಪ್ಪ. ಎಂಟು ತಿಂದರೆ ಮೈ ಬಂದುಬಿಡುತ್ತೆ' ಎಂದಳು, ತೂಕ ಇಳಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದ ಪ್ರಿಯಾ.

### ಇಡೀ ದೇಹ

ಕೆಲಸ ಕೇಳುವುದಕ್ಕೆಂದು ಒಂದು ಐಟಿ ಕಂಪನಿಗೆ ಹೋದ ಸಂಜೂ. 'ಸಾರ್, ನಾನು ಇಲ್ಲಿಯವನೇ ಸಾರ್, ಕರ್ನಾಟಕದಲ್ಲೇ ಹುಟ್ಟಿದೋನು' ಎಂದ.

'ಯಾವ ಭಾಗ?'

'ಪೂರಾ ಸರ್. ನನ್ನ ಇಡೀ ದೇಹ ಹುಟ್ಟಿದ್ದು ಇಲ್ಲೇ' ಅಂದ ಸಂಜು.

### ಅಮ್ಮನಿಗೆ ಗೊತ್ತು

'ಅಪ್ಪಾ, ಹಿಮಾಲಯ ಪರ್ವತ ಎಲ್ಲಿದೆ?'

'ನಿಮ್ಮಮ್ಮ ಎಲ್ಲೋ ಇಟ್ಟಿರ್ತಾಳೆ. ಅವಳನ್ನೇ ಕೇಳು'

### ನನ್ನ ಹತ್ತಿರವೇ ಇದೆ

'ನಮ್ಮ ಮಗು ತುಂಬ ಬುದ್ಧಿವಂತ ಕಣೆ. ಅವನಿಗೆ ನನ್ನ ಬುದ್ಧಿನೆ ಬಂದಿರೋದು.'

'ಇರಬಹುದು ರೀ. ನನಗೂ ಹಾಗೇ ಅನ್ನಿಸತ್ತೆ. ನನ್ದು ನನ್ನ ಹತ್ತಿರವೇ ಇದೆ.'

### ಫೈಲ್ ಕ್ಲೋಸ್ ಮಾಡಿ

ಪೊಲೀಸ್ ಇಲಾಖೆಗೆ ಸಂದರ್ಶನ ನಡೆದಿತ್ತು. ಸಿದ್ದರಾಮಯ್ಯ ಆಯ್ಕೆ ಸಮಿತಿಯ ಮುಂದೆ ಬಂದ. 'ರಾವಣನನ್ನು ಕೊಂದವರು ಯಾರು?' ಎಂದು ಕೇಳಿದರು. 'ರಾಮಚಂದ್ರ ಸಾರ್' ಎಂದ ಸಿದ್ದರಾಮಯ್ಯ.

'ಗುಡ್. ನಾಳೆ ಡ್ಯೂಟಿ ರಿಪೋರ್ಟ್ ಮಾಡ್ಕೋ' ಎಂದರು. ಎರಡನೆಯವನು ಮನೋಹರ. 'ರಾಮಚಂದ್ರ ಯಾರನ್ನು ಕೊಂದರೀ?' ಎಂಬ ಪ್ರಶ್ನೆ ಬಂತು. 'ರಾವಣನ್ನ ಸರ್' ಎಂದ ಮನೋಹರ.




'ಸರಿ ನಾಳೆಯೇ ಕೆಲಸಕ್ಕೆ ಹಾಜರಾಗು' ಎಂದರು.

ಪ್ರಸಂಗ ಅಷ್ಟಕ್ಕೆ ಮುಗಿಯಲಿಲ್ಲ. ವರಿಷ್ಠಾಧಿಕಾರಿಗಳವರೆಗೂ ಸುದ್ದಿ ಹೋಯಿತು. 'ಅಷ್ಟು ಹಳೆಯ ಕೇಸು ಇನ್ನೂ ಜೀವಂತವಾಗಿದೆ ಯೇನ್ರೀ? ಆರೋಪಿ ನಾಪತ್ತೆ ಯಾಗಿದ್ದಾನೆ' ಎಂದು ಫೈಲ್ ಕ್ಲೋಸ್ ಮಾಡ್ರೀ' ಎಂದು ಅವರು ಗುಡುಗಿದರಂತೆ!

(ಸಂಗ್ರಹ) ಪಾಂಚಜನ್ಯ

---

## ಸಮುದ್ರ ಮಥನ




### ಚಿತ್ರರಂಗದ ವಸ್ತುನಿಷ್ಠ ಮಾಹಿತಿ

ವಿವಾದಗಳಲ್ಲೇ ಮುಳುಗಿ ಹೋಗಿದ್ದ 2011ರ ಕನ್ನಡ ಚಿತ್ರರಂಗದಲ್ಲಿ ಕಾಳಿಗಿಂತ ಜೊಳ್ಳೇ ಹೆಚ್ಚು ಎಂಬುದನ್ನು ಬಿ.ಎಂ.ಹನೀಫ್‌ರ ಮುಖಪುಟ ಲೇಖನ ವಸ್ತುನಿಷ್ಠವಾಗಿ ವಿಮರ್ಶಿಸಿದೆ. ವರ್ಷದ ಟಾಪ್ ಟೆನ್ ಸಿನಿಮಾಗಳ ಚ.ಹ.ರಘುನಾಥ ಆಯ್ಕೆ ಸಮಂಜಸವಾಗಿದೆ.

ಸಂಜಯ ಕುಮಾರ, ಕೋಣನಕೇರಿ/ ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ

### 'ಪರಮಾತ್ಮ' ಟಾಪ್ ಅಲ್ಲ

'ಟಾಪ್ ಟೆನ್' ಪಟ್ಟಿಗೆ ಸಂವೇದನಾರಹಿತ 'ಪರಮಾತ್ಮ' ಸಿನಿಮಾ ಸೇರಿದ್ದು ಸರಿಯಲ್ಲ.

-ಎಸ್. ರಾಮಪ್ರಸಾದ್, ಬೆಂಗಳೂರು

### 'ಬೆಟ್ಟದ ಜೀವ' ಅತ್ಯುತ್ತಮ ಅಲ್ಲ

ಶೇಷಾದ್ರಿಯವರ ಅತ್ಯುತ್ತಮ ಚಿತ್ರ 'ಬೆಟ್ಟದ ಜೀವ' ಅಲ್ಲ. ಇದಕ್ಕಿಂತ ಪರಿಣಾಮಕಾರಿ ಚಿತ್ರವನ್ನು ಅವರು ಮಾಡಬಲ್ಲರು.

-ಎಚ್.ಎಸ್. ಮಂಜುನಾಥ, ಬೆಂಗಳೂರು

### ಅಧ್ವಾನದ ಹಾಡುಗಳ ವರ್ಷ

ಮೆಲುಕು ಹಾಕಲಾಗದ ಅಧ್ವಾನದ ಹಾಡುಗಳ ವರ್ಷ 2011.

ಕೋಟೆ ಸೂರ್ಯನಾರಾಯಣ ರಾವ್, ಬೆಂಗಳೂರು

### ಜೀವಂತ ಮನೆಯ ಸೊಗಸು

ಮನೆಗೂ ಜೀವವಿದೆ ಎಂಬುದನ್ನು ಶಿಕಾಕು ಸೊಗಸಾಗಿ ವಿವರಿಸಿರುತ್ತಾರೆ. ಆದರೆ ನಗರವನ್ನು ಶಬ್ದಮಾಲಿನ್ಯಕ್ಕೆ ಮಾತ್ರ ಸೀಮಿತಗೊಳಿಸಿದ್ದು ಸರಿಯಲ್ಲ.

-ಆರ್. ಕೃಷ್ಣಮೂರ್ತಿ, ಮಂಡ್ಯ/ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ/ ಜಿ. ವಿಶ್ವನಾಥ, ಗೊಂಡೇದಹಳ್ಳಿ/ಶಂಕರೇಗೌಡ ತುಂಬಕೆರೆ, ಮಂಡ್ಯ

### ರಾಜಕಾರಣಿಗಳ ಉದ್ಧಟತನ

'ಪ್ರಜಾಸತ್ತೆಯಲ್ಲಿ ಪಾಳೇಗಾರಿಕೆ' ಲಕ್ಷ್ಮಣ ಕೊಡಸೆ ಬರಹ ಸಮಯೋಚಿತ. ಎಂಎಲ್‌ಎಗಳು ಪಾಳೇಗಾರರಷ್ಟೇ ಅಲ್ಲ, ತಮ್ಮಷ್ಟಕ್ಕೆ ತಾವು ಬೃಹಸ್ಪತಿಗಳೆಂದೇ ಭಾವಿಸಿದ್ದಾರೆ. ಕವಿ ಸಾಹಿತಿಗಳಿಗೆ ಅಂಕುಶ ಹಾಕಲು ಹೊರಟಿರುವುದು ಉದ್ದಟತನ.

-ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

### ಗತಕಾಲದ ಸಿಹಿ ನೆನಪು

'ಅಮರಗಾಯಕಿ ಭಾನುಮತಿ' ಪ್ರಾಣೇಶರಾವ್ ಲೇಖನ ಗತಕಾಲದ ಸಿಹಿ ನೆನಪಲ್ಲಿ ಮುಳುಗಿಸಿತು.

-ತರಂಗಿಣಿ, ತುಮಕೂರು

### ಅಂದದ ಚಿತ್ರ, ಚಂದದ ಬರಹ

ಛಾಯಾಗ್ರಾಹಕ ಕಿರಣ ಪೂಣಚ್ಚ ಕುರಿತ ಹ.ಸ. ಬ್ಯಾಕೋಡರ ಚಿತ್ರ-ಲೇಖನ ಚೆನ್ನಾಗಿತ್ತು.

-ಎಂ.ಎಲ್. ಲಕ್ಷ್ಮಣ್ ರಾವ್, ದಾವಣಗೆರೆ/ ಕಾಳೀಹುಂಡಿ ಶಿವಕುಮಾರ್, ಮೈಸೂರು

### 'ಸುಧಾ' ನಮ್ಮ ಹೆಮ್ಮೆ

ಲಹರಿಯಲ್ಲಿ- ಮಾತೇ ಮುತ್ತಾಗಿಸಿ, ಹೆಲ್ತ್ ಪ್ಲಸ್‌ನಲ್ಲಿ- ಸಮುದ್ರ ಮಥನ ಮಾಡಿ, ನೀವೂ ಕೇಳುತ್ತ- ನಕ್ಕುಬಿಡುವ, ಈ ವಾರವೂ ನಮ್ಮೊಂದಿಗೆ- ಜಾಣರ ಪೆಟ್ಟಿಗೆಯಲ್ಲಿ ಜಾಲಾಡಿಸಿ, ಸುಖಾನುಭವ ದಾರಿ ತೋರಿಸಿ, ಕಾಮನಬಿಲ್ಲಿನ ನಮ್ಮ ಪುಟದಿಂದ, ವೈವಿಧ್ಯಮಯ ಕಥೆ- ಕಾದಂಬರಿ ನೀಡುತ್ತ ಹೊಸ ಲೇಖಕರನ್ನು ಪ್ರೋತ್ಸಾಹಿಸುವ ಪ್ರತಿವಾರದ 'ಸುಧಾ' ನಮ್ಮ ಹೆಮ್ಮೆ.

-ಪ್ರದೀಪ್ ಸಿ. ಚಿತ್ರಗಾರ, ಜಾಲಿಹಾಳ/ ಬಸವಣ್ಣ ಹೊಸಖಾಂಡೆ, ಅಥಣಿ

### ಮುದ ನೀಡಿದ ಕಥೆ

ಕೇಶವರೆಡ್ಡಿ ಹಂದ್ರಾಳರ 'ಕಿನ್ನರಿ' ಕಥೆ ಚೆನ್ನಾಗಿತ್ತು. ಮನಸ್ಸಿಗೆ ಮುದ ನೀಡಿತು. ಹಿಂದಿ ಚಿತ್ರಗಳ ನಾಯಕಿ ಮಧುಬಾಲಾಳ ಕಥೆ ಎನಿಸಿತು.

-ಎಸ್.ನಿತ್ಯ ರತ್ನಗಿರಿ, ಮೂಡಬಿದಿರೆ/ ಕೊಹಿಮ, ಬಸರಕೋಡು/ ಎಸ್. ಸುಮತಿ, ತುಮಕೂರು

### 472 ಮೆಟ್ಟಿಲುಗಳು!

'ಮೋಹಕ ಮುಳ್ಳಯ್ಯನ ಗಿರಿ'ಯ ಚಂದ್ರಹಾಸ ಚಾರ್ಮಾಡಿ ಬರಹದಲ್ಲಿ ಮಾರ್ಕಂಡೇಯ ದೇವಸ್ಥಾನಕ್ಕೆ 100ಕ್ಕೂ ಹೆಚ್ಚು ಮೆಟ್ಟಿಲನ್ನು ಏರಬೇಕು ಎಂದಿದ್ದಾರೆ. ನಾನು ಏರಿ ನೋಡಿದ್ದೇನೆ. 472 ಮೆಟ್ಟಿಲುಗಳನ್ನು ಎಣಿಸಿದ್ದೇನೆ.

-ನಾರಾಯಣ ಯಾಜಿ, ಶಿರಾಲಿ

### ಮಹಿಳೆಯರ ಮೌನ!

ಪತ್ನಿಯ ಮೇಲೆ ಹಲ್ಲೆ ಮಾಡಿ ಜೈಲು ಸೇರಿದ್ದ ದರ್ಶನ್ ಹೊರಬಂದಾಗ ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದ್ದು ಎಷ್ಟರಮಟ್ಟಿಗೆ ಸಮಂಜಸ? ಮಹಿಳಾ ಸಂಘಟನೆಗಳು ಇದನ್ನು ಪ್ರತಿಭಟಿಸದಿದ್ದುದು ವಿಪರ್ಯಾಸ.

ಗೋಪಾಲ ಆಶ್ರಿತ, ಬೆಂಗಳೂರು

### ಮತ್ತೆ ಬರುವರೆ ಕಲ್ಪನಾ

ಗಾಂಧಿನಗರ ಪೋಸ್ಟ್‌ನಲ್ಲಿ ಚಿತ್ರನಟಿ ಕಲ್ಪನಾರನ್ನು ನೆನಪಿಸಿದ್ದು 'ಅಂತಹ ನಟಿ ಮತ್ತೆ ಹುಟ್ಟುವರೇ' ಎನಿಸಿತು.

ಬೆಳ್ಳಾವೆ ರಮೇಶ್, ತುಮಕೂರು